# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 749 (1039) |
| 2 | ಸದಸ್ಯರ ಹೆಸರು | ಶ್ರೀ ಎನ್.ಅಪ್ಪಾಜಿಗೌಡ |
| 3 | ವಿಷಯ | ದಾಖಲೆರಹಿತ ಕಂದಾಯ ಗ್ರಾಮಗಳು |
| 4 | ಉತ್ತರಿಸಬೇಕಾದ ದಿನಾಂಕ | 10/03/2021 |
| 5 | ಉತ್ತರಿಸುವ ಸಚಿವರು | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಹೊಸ ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ;<br>(ತಾಲ್ಲೂಕುವಾರು ವಿವರ ನೀಡುವುದು ) | ಮಂಡ್ಯ ಜಿಲ್ಲೆಯಲ್ಲಿ ಒಟ್ಟು **23** ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ;<br>1.ಮಂಡ್ಯ ತಾಲ್ಲೂಕು **–00**<br>2.ಮದ್ದೂರು ತಾಲ್ಲೂಕು **–05**<br>3.ಮಳವಳ್ಳಿ ತಾಲ್ಲೂಕು **–02**<br>4.ಪಾಂಡವಪುರ ತಾಲ್ಲೂಕು **–06**<br>5.ಕೆ.ಆರ್.ಪೇಟೆ. ತಾಲ್ಲೂಕು **–04**<br>6.ನಾಗಮಂಗಲ ತಾಲ್ಲೂಕು **–05**<br>7.ಶ್ರೀರಂಗಪಟ್ಟಣ ತಾಲ್ಲೂಕು **–01** |
| ಆ) | ಹೊಸದಾಗಿ ಕಂದಾಯ ಗ್ರಾಮಗಳೆಂದು ಘೋಷಿಸಿರುವ ಗ್ರಾಮಗಳಲ್ಲಿ ಇಲ್ಲಿಯವರೆಗೆ ನಿವೇಶನ ಸಂಬಂಧ ಎಷ್ಟು ಹಕ್ಕುಪತ್ರಗಳನ್ನು ನೀಡಿದೆ;<br>(ತಾಲ್ಲೂಕುವಾರು ವಿವರ ನೀಡುವುದು) | ಯಾವುದೇ ಹಕ್ಕುಪತ್ರಗಳನ್ನು ವಿತರಿಸಿರುವುದಿಲ್ಲ. |
| ಇ) | ಕಂದಾಯ ಗ್ರಾಮಗಳೆಂದು ಗುರುತಿಸಲು ಇರುವ ಮಾನದಂಡಗಳಾವುವು; (ವಿವರ ನೀಡುವುದು) | • ಕನಿಷ್ಠ ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250ನ್ನು ಹೊಂದಿರುವ ದಾಖಲೆರಹಿತ ಜನವಸತಿ ಪ್ರದೇಶಗಳು.<br>• ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ ಸುಮಾರು 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು–(ಈ ಷರತ್ತನ್ನು ಬೆಟ್ಟಗುಡ್ಡಗಳ ತಪ್ಪಲು ಮತ್ತು ಅರಣ್ಯ ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳ ಪ್ರಕರಣದಲ್ಲಿ ಸಕಾರಣದ ಸಮೇತ ಸಡಿಲಿಸಬಹುದು)<br>• ಮೂಲ ಗ್ರಾಮಠಾಣಕ್ಕೆ ಹೊಂದಿಕೊಂಡಿರಬಾರದು.(ಮೂಲ ಗ್ರಾಮಠಾಣದಿಂದ ಅಂದಾಜು 1 ಕಿ.ಮೀ ಅಂತರ ಸೂಕ್ತ) |

| | | |
|---|---|---|
| ಈ) | ಕಂದಾಯ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ನಿವೇಶನ ನೀಡಲು ಇರುವ ಮಾನದಂಡಗಳಾವುವು; (ವಿವರ ನೀಡುವುದು) | • ದಿನಾಂಕ:16-12-2017ಕ್ಕಿಂತ ಮೊದಲು ದಾಖಲೆಸಹಿತ ಜನವಸತಿಯಲ್ಲಿ ವಾಸವಿರುವ ಬಗ್ಗೆ ದಾಖಲೆನೀಡಬೇಕು. ಯಾವುದೇ ವ್ಯಕ್ತಿಗೆ ನಾಲ್ಕು ಸಾವಿರ ಚದರ ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನ ನೀಡಲಾಗುವುದಿಲ್ಲ.<br>• ನಮೂನೆ 3-ಸಿ ಯಲ್ಲಿ ನಿವೇಶನ ಮಂಜೂರಾತಿಗೆ ಅರ್ಜಿಯನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ಸಲ್ಲಿಸುವುದು.<br>• ತಹಶೀಲ್ದಾರ್ ರವರು ವಿಚಾರಣೆ ನಡೆಸಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಹಾಗೂ ಇತರೆ ಇಲಾಖೆಗಳಿಂದ ನಿಯಮಾನುಸಾರ ಪರಿಶೀಲನಾ ವರದಿ ಪಡೆದು ಅರ್ಹ ಫಲಾನುಭವಿಗಳಿಗೆ ನಮೂನೆ 3-ಇ ರಲ್ಲಿ ಹಕ್ಕುಪತ್ರ ನೀಡುತ್ತಿದೆ. |

**ಕಂಇ 03 ಪಿಎಲ್‌ಸಿ 2021**

(ಆರ್. ಅಶೋಕ್)

**ಕಂದಾಯ ಸಚಿವರು**